# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.24 ರ ಹೆಚ್.ಬಿ.ಆರ್ ಲೇಔಟ್‌ಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 05.01.2019 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

1. ಶ್ರೀ.ಪಿ.ಆನಂದ್, ಬಿ.ಬಿ.ಎಂ.ಪಿ ಸದಸ್ಯರು ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರು.
2. ಶ್ರೀಮತಿ.ಮುಕ್ತನಾಯಕ್, ವಾರ್ಡ್ ಸಮಿತಿಯ ಸದಸ್ಯರು.
3. ಶ್ರೀಮತಿ.ರೋಜ್ ಮೇರಿ, ವಾರ್ಡ್ ಸಮಿತಿಯ ಸದಸ್ಯರು.
4. ಶ್ರೀಮತಿ.ಫಹೀಮಾ, ವಾರ್ಡ್ ಸಮಿತಿಯ ಸದಸ್ಯರು.
5. ಶ್ರೀ.ರವಿಕುಮಾರ್, ವಾರ್ಡ್ ಸಮಿತಿಯ ಸದಸ್ಯರು.
6. ಶ್ರೀ.ಪ್ರದೀಪ್ ಪಟೇಲ್, ವಾರ್ಡ್ ಸಮಿತಿಯ ಸದಸ್ಯರು.
7. ಶ್ರೀ.ಆಜುಸಾಬ್, ವಾರ್ಡ್ ಸಮಿತಿಯ ಸದಸ್ಯರು.
8. ಶ್ರೀ. ರಮೇಶ್, ವಾರ್ಡ್ ಸಮಿತಿಯ ಸದಸ್ಯರು.
9. ಶ್ರೀ.ಶಂಕರಪ್ಪ, ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿ
10. ಶ್ರೀ.ಆಂಜಿನಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಸರ್ವಜ್ಞನಗರ
11. ಶ್ರೀ.ಅಕ್ರಂ ಪಾಷ, ವಾರ್ಡ್ ಸಮಿತಿಯ ಸದಸ್ಯರು.
12. ಶ್ರೀಮತಿ.ಚಿತ್ರಾ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ.24
13. ಶ್ರೀ.ಅಕಿಲ್ ಕುಮಾರ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ.24
14. ಶ್ರೀ.ಸುರೇಶ್ ಕುಮಾರ್ ಸಹಾಯಕ ಇಂಜಿನಿಯರ್ ಬೃಹತ್ ನೀರುಗಾಲುವೆ SWD)ಬೆಂಗಳೂರು

ಈ ಸಭೆಗೆ ಹಾಜರಿದ್ದ ಮೇಲ್ಕಂಡ ಅಧ್ಯಕ್ಷರು, ಸದಸ್ಯರು ಹಾಗೂ ವಾರ್ಡ್ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿಗಳು ರವರನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ತದ ನಂತರ ಶ್ರೀ.ಪಿ.ಆನಂದ್ ಬಿ.ಬಿ.ಎಂ.ಪಿ ಸದಸ್ಯರು ಹಾಗೂ ಅಧ್ಯಕ್ಷರು ಮಾತನಾಡುತ್ತಾ ಮಾನ್ಯ ಉಚ್ಛನ್ಯಾಯಾಲಯದ ಆದೇಶದಂತೆ ಪ್ರತಿ ತಿಂಗಳು ವಾರ್ಡ್ ಸಮಿತಿ ಸಭೆಯನ್ನು ಕರೆದು ವಾರ್ಡ್‌ನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಮಾನ್ಯ ಉಚ್ಛನ್ಯಾಯಾಲಯವು ನೀಡಿರುವ ನಿರ್ದೇಶನದಂತೆ ಮೈಕ್ರೋ ಪ್ಲಾನ್ ಬಗ್ಗೆ ಹಾಗೂ ವಾರ್ಡ್‌ನ ಕುಂದುಕೊರತೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.

**1) ಶ್ರೀ.ಪಿ.ಆನಂದ (ನಂದ) ಪಾಲಿಕೆ ಸದಸ್ಯರು ವಾರ್ಡ್ ಕಮಿಟಿ ಅಧ್ಯಕತೆಯನ್ನು ವಹಿಸಿ** ಮಾತನಾಡುತ್ತ **ದಿನಾಂಕ: 01.12.2018 ರಂದು** ನಡೆದ ಸಭೆಯ ನಡಾವಳಿಗಳಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ 1/2 ಕಿಲೋ ಮೀಟರ್‌ಗೆ ಒಬ್ಬ ಪೌರಕಾರ್ಮಿಕರನ್ನು ನೇಮಿಸಲು ತಿಳಿಸಿ ಸಭೆಯ ನಡವಳಿ ಪತ್ರವನ್ನು ನೀಡಿದ್ದರು ಸಹ ಪೌರ ಕಾರ್ಮಿಕರನ್ನು ನೇಮಿಸಿರುವುದಿಲ್ಲ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವದಲ್ಲದೆ ಜನ ಪ್ರತಿನಿಧಿಗಳು ಹಾಗೂ ಮಾನ್ಯ ಮಂತ್ರಿಗಳಿಂದಲು ಸಹ ವಾರ್ಡ್‌ನಲ್ಲಿ ಹೆಚ್ಚಾಗಿ ಪೌರ ಕಾರ್ಮಿಕರನ್ನು ನೇಮಿಸಲು ಹಾಗೂ ಘನತ್ಯಾಜ್ಯ ನಿರ್ವಹಣೆಗಾಗಿ ತುರ್ತು ಕ್ರಮ ವಹಿಸಲು ಎಚ್ಚರಿಕೆ ಕ್ರಮವನ್ನು ವಹಿಸಲು ತಿಳಿಸಿರುತ್ತಾರೆ.

o/c.

Scanned by CamScanner